**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 862 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24-07-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಳಗಾವಿ ನಗರಕ್ಕೆ ರಿಂಗ್ ರಸ್ತೆ ನಿರ್ಮಿಸಲು ಈ ಹಿಂದೆ ಯೋಜಿಸಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಅಂಗ ಸಂಸ್ಥೆಗೆ ನೀಡಲಾಗಿದ್ದು, ಸದರಿ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ 69.387 ಕಿ.ಮೀ ಉದ್ದದ ಬೆಳಗಾವಿ ವರ್ತುಲ ರಸ್ತೆಯನ್ನು 03 ಹಂತದಲ್ಲಿ ಕೈಗೊಳ್ಳುತ್ತಿದ್ದು ಸದರಿಯವರು ವರದಿ ಮಾಡಿರುವಂತೆ ಯೋಜನೆಯ ಪ್ರಸ್ತುತ ಹಂತದ ವಿವರ ಕೆಳಕಂಡಂತಿದೆ.<br>ಯೋಜನೆಯ 01 ಹಾಗೂ 02ನೇ ಹಂತದ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಿದ್ದು, 3ನೇ ಹಂತದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.<br>1ನೇ ಹಂತದ 34.480 ಕಿ.ಮೀ. ರಸ್ತೆಯ ನಿರ್ಮಾಣವನ್ನು ಕೈಗೊಳ್ಳಲು ಗುತ್ತಿಗೆಯನ್ನು ಮಾರ್ಚ್ 2023 ರಲ್ಲಿ ನಿಗಧಿಪಡಿಸಿದ್ದು. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿರುವುದರಿಂದ ದಿನಾಂಕ: 16-05-2024 ರಲ್ಲಿ ನೀಡಲಾಗಿದ್ದ LOA ರದ್ದುಪಡಿಸಲಾಗಿದೆಯೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ದವರು ವರದಿಸಿರುತ್ತಾರೆ. |
| ಆ) | ಸದರಿ ರಿಂಗ್ ರಸ್ತೆ ನಿರ್ಮಿಸುವ ಕಾಮಗಾರಿ ಸಾಕಷ್ಟು ವಿಳಂಬವಾಗಿದ್ದು, ಇದಕ್ಕೆ ಕಾರಣಗಳೇನು; | ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾದ ಕಾರಣ ಸದರಿ ರಸ್ತೆ ಕಾಮಗಾರಿ ವಿಳಂಬವಾಗಿದೆ. |
| ಇ) | ಈ ರಸ್ತೆ ಕಾಮಗಾರಿಗಾಗಿ ಬೇಕಾಗುವ ಭೂಮಿಯನ್ನು ಸರ್ಕಾರ ಭೂಸ್ವಾಧೀನ ಪಡಿಸಿಕೊಂಡಿದೆಯೇ; ಮತ್ತು ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು) | ಬೆಳಗಾವಿ ವರ್ತುಲ ರಸ್ತೆಯನ್ನು 03 ಹಂತದಲ್ಲಿ ಕೈಗೊಳ್ಳುತ್ತಿದ್ದು, 510.8488 ಹೆಕ್ಟರ್ ಜಮೀನಿನ 3(A) ಅಧಿಸೂಚನೆಯನ್ನು ದಿನಾಂಕ: 13-09-2022 ರಂದು ಹೊರಡಿಸಿದೆ. 1ನೇ ಹಂತದ ಪೂರ್ಣ ಹಾಗೂ 2&3ನೇ ಹಂತದ ಭಾಗಶಃ ಗ್ರಾಮಗಳು ಸೇರಿ ಒಟ್ಟು 390.3204 ಹೆಕ್ಟೇರ್ ಜಮೀನಿಗೆ ದಿನಾಂಕ:28-06-2023 ಮತ್ತು 24-08-2023 ರಂದು 3(D) ಅಧಿಸೂಚನೆ ಹೊರಡಿಸಿದೆ.<br>ಪ್ರಸ್ತುತ 79.13 ಹೆಕ್ಟೇರ್ ಜಮೀನಿನ 3(G) ಅವಾರ್ಡ್‌ಗಳನ್ನು SLAO, NHAI ಬೆಳಗಾವಿ ಇವರು ಪೂರ್ಣಗೊಳಿಸಿ |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| | | ಅನುಮೋದನೆಗೊಂಡಿದ್ದು ಪರಿಹಾರವನ್ನು ವಿತರಿಸಲಾಗುತ್ತಿದೆ. 24.69 ಹೆಕ್ಟೇರ್ ಜಮೀನಿನ 3(G) ಅವಾರ್ಡ್ ಪೂರ್ಣಗೊಂಡು NHAI ರಲ್ಲಿ ಪರಿಶೀಲನೆಯಲ್ಲಿದೆ. ಉಳಿದ ಹೆಕ್ಟೇರ್ ಜಮೀನಿನ 3(G) ಪ್ರಕ್ರಿಯೆ ಬಗ್ಗೆ SLAO, NHAI ಬೆಳಗಾವಿ ಇವರ ವತಿಯಿಂದ ಕ್ರಮ ವಹಿಸಲಾಗುತ್ತಿದೆ. ಭೂಸ್ವಾಧೀನಪಡಿಸಿ ಹಸ್ತಾಂತರಗೊಂಡ ನಂತರ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗುವುದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ತಿಳಿಸಿರುತ್ತಾರೆ. |

ಸಂಖ್ಯೆ: ಲೋಇ 151 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು